# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 285 |
| 2 | ಸದಸ್ಯರ ಹೆಸರು | : | ಶ್ರೀ ಎಸ್.ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 18-07-2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಬನಶಂಕರಿಯಿಂದ ತಲಘಟ್ಟಪುರದವರೆಗಿನ ರಸ್ತೆಯಲ್ಲಿ ವಾಹನಗಳ ದಟ್ಟಣೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಈ ರಸ್ತೆಯಲ್ಲಿ ಸುಗಮ ಸಂಚಾರ ದುಸ್ತರವಾಗಿ ಸಾರ್ವಜನಿಕರಿಗೆ ಬಹಳ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ಬನಶಂಕರಿಯಿಂದ ತಲಘಟ್ಟಪುರದವರೆಗಿನ ರಸ್ತೆಯಲ್ಲಿ ಉಂಟಾಗುತ್ತಿರುವ ವಾಹನ ದಟ್ಟಣೆಯನ್ನು ಸುಗಮಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ರಸ್ತೆಯಲ್ಲಿ ಫ್ಲೈಓವರ್ ನಿರ್ಮಾಣ ಅಥವಾ ಬೇರೆ ಯಾವುದಾದರೂ ಯೋಜನೆಯನ್ನು ರೂಪಿಸಲು ಸರ್ಕಾರ ಕ್ರಮ ವಹಿಸುವುದೇ? (ವಿವರ ನೀಡುವುದು) | • ಬನಶಂಕರಿಯಿಂದ ತಲಘಟ್ಟಪುರದವರೆಗೆ ಬರುವ ಸಾರಕ್ಕಿ ವೃತ್ತದಲ್ಲಿ ವಾಹನ ಮತ್ತು ಮೆಟ್ರೋ ಎರಡು ಇರುವ ಮೆಟ್ರೋ ಓವರ್ ರಸ್ತೆ (ಎಂ.ಓ.ಆರ್) ಡಬಲ್ ಡೆಕ್ಕರ್ ನಿರ್ಮಿಸುವ ಬಗ್ಗೆ ಸಾಧಕ-ಬಾಧಕಗಳನ್ನು ಪರಿಶೀಲಿಸಲಾಗುತ್ತಿದೆ.<br>• ಬನಶಂಕರಿ ರಸ್ತೆಯ ಪರ್ಯಾಯವಾಗಿ ಮಾರೇನಹಳ್ಳಿ ಮುಖ್ಯರಸ್ತೆಯಿಂದ ನೈಸ್ ರೋಡ್‌ವರೆಗೂ ಬೆಂಗಳೂರು ಜಲ ಮಂಡಳಿಯ ಪೈಪ್‌ಲೈನ್ ರಸ್ತೆ ಮಾರ್ಗವನ್ನು ಬಳಸಿಕೊಂಡು ಮೇಲ್ಸೇತುವೆ ನಿರ್ಮಿಸುವ ಬಗ್ಗೆ ಕಾರ್ಯಸಾಧನ ವರದಿಯನ್ನು ತಯಾರಿಸಲಾಗುತ್ತಿರುತ್ತದೆ.<br>• ತಕ್ಷಣದ ಪರಿಹಾರವಾಗಿ ಕನಕಪುರ ರಸ್ತೆಯನ್ನು ಹೈಡೆನ್ಸಿಟಿ ಕಾರಿಡಾರ್ ಯೋಜನೆಯಲ್ಲಿ ಸವೆದ ರಸ್ತೆ ಸ್ಥಳಗಳಲ್ಲಿ ಡಾಂಬರೀಕರಣ ಮತ್ತು ಮೆಟ್ರೋ ಯೋಜನೆಯಲ್ಲಿ ಬಿಟ್ಟು ಹೋದ ಸ್ಥಳಗಳಲ್ಲಿ ಪಾದಚಾರಿ ಮಾರ್ಗವನ್ನು ನಿರ್ಮಿಸುವ ಕಾಮಗಾರಿಯನ್ನು ರೂ.28.35 ಕೋಟಿಗಳಲ್ಲಿ (ಜಿ.ಎಸ್.ಟಿ ತೆರಿಗೆ ಒಳಗೊಂಡಂತೆ) ಕೈಗೆತ್ತಿಕೊಳ್ಳಲಾಗಿದೆ. |

**ನಅಇ 333 ಎಂಎನ್‌ವೈ 2024**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ